

**ಡಾ. ವಿನೋದ ಛೆಬ್ಬಿ**
ಲೈಂಗಿಕ, ದಾಂಪತ್ಯ ಮತ್ತು ಮನೋಚಿಕಿತ್ಸಕರು

**ಯಾರೊಡನೆಯೂ ಹೇಳಿಕೊಳ್ಳಲಾಗದ ಲೈಂಗಿಕ, ದಾಂಪತ್ಯ ಮತ್ತು ಮಾನಸಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುವ ಅಂಕಣವಿದು. ನೀವೂ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು.**

ಕೇವಲ ಕಾಲ್ಪನಿಕ ಪ್ರಶ್ನೆಗಳನ್ನು ಹುಟ್ಟುಹಾಕಿಕೊಂಡು ಉತ್ತರಿಸುವ ತಮಗೆ ಮತ್ತು ಸುಖೀಭವ ವಿಭಾಗಕ್ಕೆ ವಂದನೆಗಳು. ಉತ್ತರ ಕೊಡುವಿರೆಂದು ಯಾವುದೇ ನಂಬಿಕೆ ಇಲ್ಲದಿದ್ದರೂ 22ನೇ ಬಾರಿಗೆ ನಿಮಗೆ ಬರೆಯುತ್ತಿದ್ದೇನೆ. ನನಗೆ 37 ವರ್ಷ. ಲೈಂಗಿಕ ಕ್ರಿಯೆಯಲ್ಲಿ ತೀವ್ರ ಆಸಕ್ತಿಯಿದೆ. ಅನೇಕ ಹೆಣ್ಣುಗಳನ್ನು ನಾನಾ ರೀತಿಯಲ್ಲಿ ಸಂಭೋಗಿಸಿದ್ದೇನೆ (ಲೆಕ್ಕ ಕೊಡಲಾಗಿದೆ); ಒಂದು ರಾತ್ರಿ ಇಬ್ಬರೊಂದಿಗೆ ಏಕಕಾಲಕ್ಕೆ ಒಂಬತ್ತು ಸಲ ಸಂಭೋಗಿಸಿದ್ದೇನೆ. (ವಿವರಗಳಿಗೆ ಕತ್ತರಿ ಹಿಡಿಯಲಾಗಿದೆ). ಇತ್ತೀಚೆಗೆ 21ರ ಯುವತಿಯೊಬ್ಬಳು ನನ್ನನ್ನು ಕುರ್ಚಿಗೆ ಕಟ್ಟಿಹಾಕಿ, ತಾನೇ ಮುಂದುವರಿದು ಸಂಭೋಗಿಸಿ ಸುಖಪಟ್ಟಳು. ಅಂದಿನಿಂದ ನನಗೆ ಉದ್ರೇಕ ನಿಂತೇ ಹೋಗಿದೆ. ಹೆಣ್ಣುಗಳು ಎಷ್ಟೇ ಮುತ್ತಿಟ್ಟರೂ ನನ್ನ ಶಿಶ್ನವು ಸತ್ತಹಾವಿನಂತಿದೆ. ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ನಿರ್ಧರಿಸಿ ಲೈಂಗಿಕ ಸಹಾಯವಾಣಿಯಲ್ಲಿ ಮಾತಾಡಿದಾಗ ಬೇಡವೆಂದು ಹೇಳಿ ಜೀವ ಉಳಿಸಿದ್ದೀರಿ. ಈಗ ನನ್ನ ಶಿಶ್ನದ ಗಡಸುತನವನ್ನು ಸರಿಪಡಿಸಲು ನೇರವಾದ ವ್ಯವಹಾರಿಕ ಉತ್ತರ ಕೊಡಿ, ಕಲ್ಪನೆಯ ಕಟ್ಟುಕತೆ ಬೇಡ. ಸಂಭೋಗ ನಿಲ್ಲಿಸು ಎಂದು ಮಾತ್ರ ಹೇಳಬೇಡಿ.

ನಾನು ಉಲ್ಲೇಖಿಸುತ್ತಿರುವ ಪ್ರಶ್ನೆಗಳು ಬರೀ ಕಲ್ಪನೆಗಳೆಂದು ನೀವು ನಂಬಿದ್ದರೆ ಅದನ್ನೂ ಮೀರಿಸಿದ ಕಲ್ಪನೆ ನಿಮ್ಮ ಪ್ರಶ್ನೆಯಲ್ಲಿದೆಯಲ್ಲ? ನಿಮ್ಮಂತೆ ಇತರರೂ ನಿಮ್ಮ ಪ್ರಶ್ನೆಯನ್ನು 'ಕಾಲ್ಪನಿಕ' ಎಂದು ತಿಳಿಯುವ ಸಂಭವವಿದೆಯಲ್ಲವೆ? ನೀವು ತಿಳಿಸಿರುವುದು ಮಾತ್ರ ನಂಬಲರ್ಹ, ಇತರರು ತಿಳಿಸಿರುವುದು ಕಲ್ಪನೆ ಹೇಗಾಗುತ್ತವೆ ಎಂಬ ಪ್ರಶ್ನೆಗೆ ನೀವೇ ಉತ್ತರಿಸಬೇಕಷ್ಟೆ. ಇತರರ ಅನುಭವಗಳನ್ನು ನಿರಾಕರಿಸುತ್ತ ನಿಮ್ಮದನ್ನು ಮಾತ್ರ ಸತ್ಯವೆಂದು ನಂಬುವುದು ನಿಮ್ಮ ಸ್ವಯಂಪ್ರೇಮದ (ನಾರ್ಸಿಸಿಸಂ) ವ್ಯಕ್ತಿತ್ವವನ್ನು ಎತ್ತಿತೋರಿಸುತ್ತದೆ; ಮತ್ತು ಇದರಿಂದಲೇ ನಿಮ್ಮ ಸಮಸ್ಯೆ ಹುಟ್ಟಿಕೊಂಡಿದೆ. ನಿಮ್ಮ ಕಾಮಸಾಹಸಗಾಥೆಯ ಬೆನ್ನುಹತ್ತಿ ದಾಖಲೆಯ ಮೇಲೆ ದಾಖಲೆಗಳನ್ನು ಮಾಡುತ್ತ, ನಿಮ್ಮ ಮುಂಚಿನ ದಾಖಲೆಗಳನ್ನು ನೀವೇ ಮುರಿಯುತ್ತ ನಿಮ್ಮ ಬೆನ್ನನ್ನು ಸತತ ನೀವೇ ಚಪ್ಪರಿಸಿಕೊಂಡಿದ್ದೀರಿ. ದಾಖಲೆ ಮಾಡುವ ಭರದಲ್ಲಿ ಚಂಗಿಸ್ ಖಾನನಂತೆ ಒಂದೊಂದು ಹೆಣ್ಣನ್ನೂ ಒಂದೊಂದು ಸಂಭೋಗವನ್ನೂ ಅಂಕಿಸಂಖ್ಯೆಗಳನ್ನಾಗಿ ಇಳಿಸಿದ್ದೀರಿ. ಹಾಗೆ ನೋಡಿದರೆ ನಿಮಗೆ ಸಾರ್ಥಕತೆ ಕೊಟ್ಟಿರುವುದು ಹೆಣ್ಣುಗಳಲ್ಲ, ಅವರಿಂದ ಸಂಪಾದಿಸಿದ ಅಂಕಿ ಅಂಶಗಳು ಮಾತ್ರ! ಇದರಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾದರೂ ತೆಳುಚರ್ಮದ ನಿಮಗೆ ತೇಜೋವಧೆ ಎಂದೆನಿಸುವ ಭಯವಿದೆ. ಅಷ್ಟೇ ಅಲ್ಲ, ದಾಖಲೆಗಳನ್ನು ಮಾಡುವುದು ನಿಲ್ಲಿಸಿದರೂ ಅದು ನಿಮ್ಮ ಗಂಡಸುತನಕ್ಕೆ ಅವಮಾನ ಎನ್ನುವಷ್ಟು ಸ್ವಯಂಪ್ರೇಮ ನೆಲೆಯೂರಿದೆ. ವಿಷಯ ಹೀಗಿರುವಾಗ ಪ್ರತಿ ಸಂಭೋಗದಲ್ಲೂ ನೀವೇ ಕ್ರಿಯಾಶೀಲರಾಗಿ ಗರ್ವಪಡುತ್ತಿದ್ದ ನಿಮಗೆ ಕೊನೆಯ ಸಂಭೋಗ ಕೈಕೊಟ್ಟಿದೆ. ಅದರಲ್ಲಿ ನೀವು ಕೈಕಟ್ಟಿ(ಸಿ)ಕೊಂಡು ತಟಸ್ಥವಾಗಿದ್ದು ಹೆಣ್ಣೇ ಎಲ್ಲವನ್ನೂ ಮಾಡಿಮುಗಿಸಿದ್ದಾಳೆ. ಹಾಗಾದರೆ ಈ ದಾಖಲೆ ನಿಮ್ಮದೋ ಅವಳದೋ? ಅವಳದಾದರೆ ನೀವು ಮೊಟ್ಟಮೊದಲ ಬಾರಿಗೆ ಸೋಲೊಪ್ಪಿದ ಹಾಗಾಯಿತು; ದಾಖಲೆ ನಿಮ್ಮದೆಂದುಕೊಂಡರೆ ನೀವು ನಿಷ್ಕ್ರಿಯರಾಗಿದ್ದರಿಂದ ನಿಮ್ಮದು ಹೇಗಾಗುತ್ತದೆ. ಅಷ್ಟೇ ಅಲ್ಲ, ಕೊನೆಯ ಸಂಭೋಗವನ್ನು ನಿಮ್ಮ ವೈವಿಧ್ಯತೆಗೆ (ಅದೂ ಅವಳ ಒತ್ತಾಯದಿಂದ ಆದುದು) ಸೇರಿಸಬೇಕೋ ಅಥವಾ ನಿಮ್ಮ ನಿಷ್ಕ್ರಿಯತೆಗೆ ಸೇರಿಸಬೇಕೋ ಎನ್ನುವುದನ್ನು ನಿರ್ಧರಿಸಲಾಗಿಲ್ಲ. ಎರಡರಲ್ಲಿ ಯಾವುದನ್ನು ಆರಿಸಿಕೊಂಡರೂ ನಿಮ್ಮ ಗಂಡೆನಿಸಿಕೊಳ್ಳುವ ಅರ್ಹತೆಗೆ ವಿರುದ್ಧವಾಗುತ್ತದೆ. ಯಾಕೆಂದರೆ, ಯಾವುದಕ್ಕೂ ನೀವೇ 'ಮಾಡಿ'ದರೆ ಮಾತ್ರ ಸಂಭೋಗ ಎಂದು ನಂಬಿರುವವರು ಒಂದೇ ಒಂದು ಸಲ ಹೆಣ್ಣಿನಿಂದ 'ಮಾಡಿಸಿ'ಕೊಂಡಾಗ ನಿಮ್ಮ ಗಂಡುತನವು ಹಿಂದುಳಿದು, ಚಿಕ್ಕ ಸೂಜಿ ಚುಚ್ಚಿದರೂ ಪೂರ್ತಿ ಗಾಳಿ ಕಳೆದುಕೊಳ್ಳುವ ಬಲೂನಿನಂತೆ ನಿಮ್ಮ ಸ್ವಯಂಪ್ರೇಮವು ಕುಸಿದಿದೆ. 'ನಾನು ನಿಜವಾಗಲೂ ನಾನೆಯೇ?' ಎನ್ನುವ ದಿಗ್ಭ್ರಮೆಯಲ್ಲಿ ಕಾಮೋದ್ರೇಕವಾಗದೆ ಶಿಶ್ನದ ಬಿರುಸುತನವನ್ನು ಕಳೆದುಕೊಂಡಿದ್ದೀರಿ. ಇನ್ನು, (ನೀವು ಬಯಸಿದಂತೆ) ವ್ಯವಹಾರಿಕ ಪರಿಹಾರ: 1) ವ್ಯವಹಾರಿಕವಾಗಿಯಾದರೂ ಹೆಣ್ಣನ್ನು ಸಂಭೋಗದ ಸಂಗಾತಿ ಎಂದುಕೊಳ್ಳಿ. ಯಾವುದೇ ವ್ಯವಹಾರದಲ್ಲಿ ಕೊಡುತೆಗೆದುಕೊಳ್ಳುವುದು ಇರುವ ಹಾಗೆ ಕಾಮಕಲಾಪಗಳಲ್ಲೂ ಕೊಡುವುದು ಅರ್ಥಮಾಡಿಕೊಳ್ಳಿ. 2) ಹೆಣ್ಣು ಕೂಡ ಗಂಡನ್ನು (ಅವನು ನಿಷ್ಕ್ರಿಯವಾಗಿದ್ದರೂ) ಸಂಭೋಗಿಸಬಲ್ಲಳು ಹಾಗಾದರೂ ನೀವು ಸಂಭೋಗ ಮಾಡುವುದು ಹೆಣ್ಣಿನೊಡನೆಯೇ ಎನ್ನುವ ಸತ್ಯವನ್ನು (ಎಷ್ಟೇ ಅಹಂಕಾರವಿದ್ದರೂ) ಒಪ್ಪಿಕೊಳ್ಳಿ. 3) ಇನ್ನು ಮೇಲೆ ನಿಮ್ಮ ಕಾಮಕೂಟದ ಲೆಕ್ಕಾಚಾರವನ್ನು ನಿಲ್ಲಿಸಿ, ಸಂಬಂಧದಲ್ಲಿ ಏನು ನಡೆಯಬೇಕು ಎನ್ನುವುದರ ಬಗೆಗೆ ಮನಸ್ಸುಕೊಡಿ. ಬೇರೆ ರೀತಿಯಲ್ಲಿ ಹೇಳುವುದಾದರೆ ಹೆಣ್ಣಿನೊಡನೆ ಸಮಾನ ಸಂಬಂಧವನ್ನು ಅನುಭವಿಸಲು ಮನಸ್ಸುಮಾಡಿ. 4) ಇದಕ್ಕೂ ಸರಿಹೋಗದಿದ್ದರೆ ಲೈಂಗಿಕ– ಮನೋಚಿಕಿತ್ಸಕರನ್ನು ಭೇಟಿಮಾಡಿ. ಕೊನೆಯ ಮಾತು (ಇದು ಎಷ್ಟರ ಮಟ್ಟಿಗೆ ನಿಮಗೆ ಅರ್ಥವಾಗುವುದೆಂಬುದು ನನಗೆ ಖಾತ್ರಿಯಿಲ್ಲ): ಕಾಮಕೂಟವೆಂದರೆ ಕಲ್ಪನಾವಿಲಾಸದ ಆಗರ. ಕಲ್ಪನೆಯಿಲ್ಲದೆ ಕಾಮವಿಲ್ಲ. ಇಲ್ಲಿ ಶರೀರವು ಒಂದು ವಾಹಕವೇ ಹೊರತು ಶರೀರವೇ ಎಲ್ಲವೂ ಅಲ್ಲ!

ನನಗೆ 62, ಹೆಂಡತಿಗೆ 56. ಇಬ್ಬರಿಗೂ ಕಾಮಕೂಟವೆಂದರೆ ಬಲು ಇಷ್ಟ. ಇತ್ತೀಚೆಗೆ ನನಗೆ ಬೈಪಾಸ್ ಆಪರೇಷನ್ ಆಗಿದ್ದು, ಸಂಭೋಗಕ್ಕೆ ಹೋದರೆ ಶಿಶ್ನವು ಸರಿಯಾಗಿ ನಿಮಿರುವುದಿಲ್ಲ. ವಯಾಗ್ರಾ ಬೇಕೆಂದು ಹೋದರೆ ಜೀವಕ್ಕೆ ಅಪಾಯವೆಂದು ವೈದ್ಯರು ಎಚ್ಚರಿಸಿದ್ದಾರೆ. ಇದು ಸರಿಯೆ? ಬೈಪಾಸ್ ಆಗಿರುವ ನನ್ನ ಸ್ನೇಹಿತನು ಅಮೇರಿಕೆಯಿಂದ ತಂದ ಪಂಪ್ ಉಪಯೋಗಿಸುತ್ತಿದ್ದಾನೆ. ಇದನ್ನು ನಾನೂ ಉಪಯೋಗಿಸಬೇಕೆಂದಿದ್ದೇನೆ. ಹೆಣ್ಣಿನ ತೃಪ್ತಿಗಾಗಿ ಕೃತಕ ಶಿಶ್ನವನ್ನು ಉಪಯೋಗಿಸಬಹುದು ಎಂದು ಕೇಳಿದ ನೆನಪು. ಈ ಪಂಪ್, ಕೃತಕ ಶಿಶ್ನ ನಮ್ಮಲ್ಲಿ ಎಲ್ಲಿ ಸಿಗುತ್ತದೆ? ಮಾಹಿತಿ ತಿಳಿಸಿ.

ನಿಮ್ಮ ವೈದ್ಯರು ಹೇಳಿದ್ದು ಸರಿ: ಹೃದಯದ ತೊಂದರೆ ಇದ್ದು ನೈಟ್ರೇಟ್ ಅಥವಾ ನೈಟ್ರೈಟ್ ಇರುವ ಮಾತ್ರೆಗಳನ್ನು ಸೇವಿಸುತ್ತಿರುವವರು ವಯಾಗ್ರ ಮಾತ್ರೆಯನ್ನು ಸೇವಿಸಿದಲ್ಲಿ ಅಡ್ಡ ಪರಿಣಾಮದಿಂದ ರಕ್ತದ ಒತ್ತಡ ಸರ್ರನೇ ಇಳಿದು ಜೀವಕ್ಕೆ ಅಪಾಯವಾಗುವ ಸಂಭವವಿದೆ. ಇಂಥವರು ಪಂಪ್ ಉಪಯೋಗಿಸಬಹುದು. ಕೃತಕ ಶಿಶ್ನ ಅಥವ ಶಿಶ್ನವನ್ನು ಹೋಲುವ ಯಾವುದೇ ಆಟಿಗೆಯ ಮಾರಾಟವನ್ನು ನಮ್ಮ ದೇಶದಲ್ಲಿ ನಿಷೇದಿಸಲಾಗಿದೆ. ಪಂಪ್ ಮತ್ತು ಕೃತಕ ಶಿಶ್ನದಂಥ ಉಪಕರಣಗಳು ಬೆಂಗಳೂರಿನ ಮೆಡಿಸೆಕ್ಸ್ ಫೌಂಡೇಶನ್ ಸಂಸ್ಥೆಯಲ್ಲಿ (ದೂ. 080 23101205, 23111666) ಲೈಂಗಿಕ ವೈದ್ಯರ ಶಿಫಾರಸಿನ ಮೇರೆಗೆ ಮಾತ್ರ ದೊರಕುತ್ತವೆ.

ಲೈಂಗಿಕ ಸಹಾಯವಾಣಿ: ಲೈಂಗಿಕ ಸಮಸ್ಯೆಗಳ ತುರ್ತು ಪರಿಹಾರಕ್ಕಾಗಿ ಡಾ. ವಿನೋದ ಛೆಬ್ಬಿಯವರನ್ನು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಬೆಂಗಳೂರಿನ ದೂರವಾಣಿಯ ಸಂಖ್ಯೆ (080) 23111666 ಅಥವಾ 23101205ರ ಮೂಲಕ ಸಂಪರ್ಕಿಸಬಹುದು. ದೂರವಾಣಿಯ ಸಂಪರ್ಕ ಸಿಗದಿದ್ದಲ್ಲಿ ಪತ್ರದ ಮೂಲಕ ತಮ್ಮ ಮೊಬೈಲ್ ಸಂಖ್ಯೆಯನ್ನು ತಿಳಿಸಿ ವೈದ್ಯರ ಉತ್ತರಕ್ಕಾಗಿ ಕಾಯಬಹುದು.

**ನಿಮ್ಮ ಪ್ರಶ್ನೆಗಳನ್ನು ಸಂಪಾದಕರು, 'ಸುಧಾ' 'ಸುಖೀಭವ' ವಿಭಾಗ, ನಂ. 75 ಎಂ.ಜಿ. ರಸ್ತೆ, ಬೆಂಗಳೂರು-01 ವಿಳಾಸಕ್ಕೆ ಕಳುಹಿಸಿ**